# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
website: https://kptcl.karnataka.gov.in
ಇ-ಮೇಲ್‌ವಿಳಾಸ: director.ahr.kptcl@gmail.com

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ ವಿಳಾಸ : ನಿಗಮ ಕಾರ್ಯಾಲಯ, ಕಾವೇರಿಭವನ, ಕೆ.ಜಿ.ರಸ್ತೆ, ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ14/526/2019-20 ದಿನಾಂಕ: 7 OCT 2022

## : ಸುತ್ತೋಲೆ:

**ವಿಷಯ:** ನಿಗಮದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಕೆಲಸಗಾರರಿಗೆ ದಿನಾಂಕ: 28.07.2022 ರಿಂದ ಜಾರಿಗೆ ಬರುವಂತೆ ಪರಿಗಣಿಸಬೇಕಾಗಿರುವ ಕನಿಷ್ಠ ವೇತನದ ಬಗ್ಗೆ.

**ಉಲ್ಲೇಖ:**
1. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ರವರ ಆದೇಶ ಸಂಖ್ಯೆ: ಡಿ.ಇ.ಎಸ್/ಎಸ್‌ಐಪಿ/ ಪಿಡಬ್ಲ್ಯೂಎಕ್ಸ್/ 01/2022. ದಿನಾಂಕ: 19.02.2022.
2. ಈ ಕಚೇರಿ ಸುತ್ತೋಲೆ: ಕವಿಪ್ರನಿನಿ/ಬಿ14/526/2019-20, ದಿನಾಂಕ: 15.03.2022 ಮತ್ತು 04.04.2022.
3. ಕಾರ್ಮಿಕ ಇಲಾಖೆ (ಕನಿಷ್ಠ ವೇತನ), ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು, ರವರ ಅಧಿಸೂಚನೆ ಸಂಖ್ಯೆ: ಕಾಇ106 ಎಲ್‌ಡಬ್ಲ್ಯೂಎ 2021/ 2022. ದಿನಾಂಕ: 28.07.2022.

*********

ನಿಗಮದಲ್ಲಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆಗೊಳಪಡಿಸಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಸೇವೆಗಳನ್ನು ಪಡೆಯಲಾಗುತ್ತಿದ್ದು, ಟೆಂಡರ್ ಪ್ರಕ್ರಿಯೆ ಸಮಯದಲ್ಲಿ ಸದರಿ ಹೊರಗುತ್ತಿಗೆ ಸೇವೆಗಳಿಗೆ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಕನಿಷ್ಠ ವೇತನವನ್ನು ಪರಿಗಣಿಸಲು ತಿಳಿಸಲಾಗಿರುತ್ತದೆ. ನಿಗಮದ ಉಲ್ಲೇಖಿತ (2) ರ ಸುತ್ತೋಲೆಯಲ್ಲಿ 2022-2023 ನೇ ಸಾಲಿಗೆ ಕವಿಪ್ರನಿನಿಯ ವಿವಿಧ ಸೇವೆಗಳಿಗೆ ಕಾರ್ಮಿಕ ಇಲಾಖೆಯು ಹೊರಡಿಸಿರುವ ಕನಿಷ್ಠ ವೇತನವನ್ನು ಪರಿಗಣಿಸಲು ತಿಳಿಸಲಾಗಿರುತ್ತದೆ.

ಕರ್ನಾಟಕ ಸರ್ಕಾರದ ಉಲ್ಲೇಖಿತ (3) ರ ಅಧಿಸೂಚನೆಯಲ್ಲಿ ಅನುಸೂಚಿತ ಉದ್ದಿಮೆಗಳಲ್ಲಿ ತೊಡಗಿಸಿರುವ ಕಾರ್ಮಿಕರಿಗೆ ದಿನಾಂಕ: 28.07.2022 ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲಾಗಿರುತ್ತದೆ. ಸದರಿ ಪರಿಷ್ಕೃತ ದರಗಳು ನಿಗಮ ವ್ಯಾಪ್ತಿಯಲ್ಲಿ ಪಡೆಯಲಾಗುತ್ತಿರುವ ಹೊರಗುತ್ತಿಗೆ ಸೇವೆಗೆ ಅನ್ವಯಿಸುವುದರಿಂದ, ದಿನಾಂಕ: 28.07.2022 ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಸೇವೆಯ ಮುಂದೆ ತಿಳಿಸಲಾಗಿರುವ ಪರಿಷ್ಕೃತ ದರಗಳನ್ನು ಪರಿಗಣಿಸಬೇಕಾಗಿರುತ್ತದೆ.

### 1. ವಿದ್ಯುತ್ ಸ್ಥಾವರಗಳಲ್ಲಿ ಪಾಳಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಲಸಗಾರರಿಗೆ:-

**ಮೊತ್ತ: ರೂಗಳಲ್ಲಿ**

| ಕ್ರ ಸಂ | ಪಡೆಯಲಾದ ವಿವಿಧ ಸೇವೆಗಳು | 01.04.2022 ರಿಂದ 27.07.2022 ರೂ. (ವಿಡಿಎ ಒಳಗೊಂಡಂತೆ) | 28.07.2022 ರಿಂದ 31.03.2023 ರೂ. (ವಿಡಿಎ ಒಳಗೊಂಡಂತೆ) | ಷರಾ |
|---|---|---|---|---|
| 1 | ಪಾಳಿ ಇಂಜಿನಿಯರ್ ಗ್ರೇಡ್-1 | 17657.00 | 17657.00 | ಕನಿಷ್ಠ ವೇತನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. |
| 2 | ಪಾಳಿ ಇಂಜಿನಿಯರ್ ಗ್ರೇಡ್-2 | 16255.00 | 16255.00 | |
| 3 | ಪಾಳಿ ಮತ್ತು ನಿರ್ವಹಣಾ ಸಹಾಯಕರು | 14980.00 | 14980.00 | |

-2-

2. ಇತರೆ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಲಸಗಾರರಿಗೆ:-

ಮೊತ್ತ: ರೂಗಳಲ್ಲಿ

| ಕ್ರ ಸಂ | ಪಡೆಯಲಾದ ವಿವಿಧ ಸೇವೆಗಳು | ಬಿಬಿಎಂಪಿ ಮತ್ತು ಇತರೆ ನಗರ ಪಾಲಿಕೆಗಳು (ವಿಡಿಎ ಒಳಗೊಂಡಂತೆ) | | ಜಿಲ್ಲಾ ಕೇಂದ್ರ ಸ್ಥಾನದ ನಗರಗಳಿಗೆ (Zone-1 ರಲ್ಲಿರುವ ಸ್ಥಳಗಳನ್ನು ಹೊರತು ಪಡಿಸಿ) (ವಿಡಿಎ ಒಳಗೊಂಡಂತೆ) | | ಇತರೆ ಕಾರ್ಯ ಸ್ಥಳಗಳು (ವಿಡಿಎ ಒಳಗೊಂಡಂತೆ) | |
|---|---|---|---|---|---|---|---|
| | | **Zone-1** | | **Zone-2** | | **Zone-3** | |
| | | 01.04.2022 ರಿಂದ 27.07.2022 ರೂಗಳಲ್ಲಿ. | 28.07.2022 ರಿಂದ 31.03.2023 ರೂಗಳಲ್ಲಿ. | 01.04.2022 ರಿಂದ 27.07.2022 ರೂಗಳಲ್ಲಿ. | 28.07.2022 ರಿಂದ 31.03.2023 ರೂಗಳಲ್ಲಿ. | 01.04.2022 ರಿಂದ 27.07.2022 ರೂಗಳಲ್ಲಿ. | 28.07.2022 ರಿಂದ 31.03.2023 ರೂಗಳಲ್ಲಿ. |
| 1 | ಡಾಟಾ ಎಂಟ್ರಿ ಆಪರೇಟರ್ | 15997.00 | 17502.00 | 15590.00 | 17055.00 | 15238.00 | 16668.00 |
| 2 | ವಾಹನ ಚಾಲಕ | 14677.00 | 16050.00 | 14347.00 | 15687.00 | 14017.00 | 15324.00 |
| 3 | ಕಚೇರಿ ಪರಿಚಾರಕ/ ಗಾರ್ಡನರ್/ ಹೆಲ್ಪರ್ಸ್/ರೂಂಬಾಯ್ಸ್ | 13643.00 | 14913.00 | 13357.00 | 14598.00 | 13071.00 | 14284.00 |
| 4 | ಸೆಕ್ಯೂರಿಟಿ ಸೂಪರ್ ವೈಸರ್/ ಸೆಕ್ಯೂರಿಟಿ ಇನ್ಸ್ಪೆಕ್ಟರ್/ ಅಸಿಸ್ಟೆಂಟ್ ಸೆಕ್ಯೂರಿಟಿ ಆಫಿಸರ್. | 14514.00 | 16997.00 | 14150.00 | 16232.00 | - | 15504.00 |
| 5 | ಸೆಕ್ಯೂರಿಟಿ ಗಾರ್ಡ್/ ಲೇಡಿ ಗಾರ್ಡ್/ ಲೇಡಿ ಸರ್ಚರ್ಸ್ | 13492.00 | 16681.00 | 13154.00 | 15931.00 | - | 15217.00 |

ಕವಿಪ್ರನಿನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಹೊರಗುತ್ತಿಗೆ ಕೆಲಸಗಾರರಿಗೆ ಮೇಲೆ ತಿಳಿಸಿರುವ ಪರಿಷ್ಕೃತ ಕನಿಷ್ಠ ವೇತನವನ್ನು ಪರಿಗಣಿಸಿ ದಿನಾಂಕ: 28.07.2022 ರಿಂದ ಅನ್ವಯವಾಗುವಂತೆ ಪಾವತಿವಂತೆ ಹಾಗೂ ಹೊಸದಾಗಿ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆಗೊಳಪಡಿಸುವಾಗ ಮೇಲೆ ತಿಳಿಸಿರುವ ಕನಿಷ್ಠ ವೇತನವನ್ನು ಪರಿಗಣಿಸುವಂತೆ ತಿಳಿಸಲಾಗಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ.),
ಕವಿಪ್ರನಿನಿ.

ಪ್ರತಿಯನ್ನು ಮಾಹಿತಿಗಾಗಿ:-

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
4. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.karnataka.gov.in **ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ.
2. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿ, ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್, ಕವಿಪ್ರನಿನಿ.
4. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.